## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಮೂಡಲಗಿ.

ಸಿ.ಸಿ. ನಂಃ 768/2015

ಸಿ.ಡಬ್ಲ್ಯೂ- 7
ಪಿ.ಡಬ್ಲ್ಯೂ- 4

**ದಿನಾಂಕಃ 04-07-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿದಾರರ ಹೆಸರು | : ಸಂತೋಷಕುಮಾರ ಕಟ್ಟಿಮನಿ |
| ತಂದೆಯ/ಗಂಡನ ಹೆಸರು | : ರೇವಪ್ಪ |
| ವಯಸ್ಸು | : 45 ವರ್ಷ |
| ಉದ್ಯೋಗ | : ಹಿರಿಯ ಉಪನೊಂದಣಿ ಅಧಿಕಾರಿ ಗೋಕಾಕ |
| ವಾಸ ಸ್ಥಳ | : ಬೆಂಗಳೂರು |
| ತಾಲೂಕು | : ಬೆಂಗಳೂರು |

**ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ ರವರಿಂದಃ-**

ನಾನು ದಿಃ 10-12-2012 ರಿಂದ ದಿಃ 18-06-2016 ರವರೆಗೆ ಗೋಕಾಕನ ಉಪನೊಂದಣಾಧಿಕಾರಿ ಕಚೇರಿಯಲ್ಲಿ ಉಪನೊಂದಣಾಧಿಕಾರಿ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಸ್ತು ನಂ. 3823/2010-11 ದಾಖಲಾತಿಗೆ ಸಂಬಂಧಿಸಿದಂತೆ ಸಾಕ್ಷಿದಾರರ ಗುರುತಿನ ಚೀಟಿಯನ್ನು ಒದಗಿಸುವಂತೆ ಪ್ರಕರಣದ ತನಿಖಾಧಿಕಾರಿಗೆ ಚಾಸಾ 10 ರವರು ದಿಃ 18-03-2015 ರಂದು ನಿವೇದನೆ ಸಲ್ಲಿಸಿರುತ್ತಾರೆ. ದಾಖಲಾತಿಗಳನ್ನು ಪರಿಶೀಲಿಸಿ ದಿಃ 12-08-2015 ರಂದು ನೊಂದಣಿ ಸಮಯದಲ್ಲಿ ಸಾಕ್ಷಿದಾರರ ಗುರುತಿನ ಚೀಟಿಗಳನ್ನು ಪಡೆದುಕೊಂಡಿರುವುದಿಲ್ಲ ಎಂದು ನಾನು ತನಿಖಾಧಿಕಾರಿಗೆ ಒಂದು ಪತ್ರ ವ್ಯವಹಾರ ಮಾಡಿರುತ್ತೇನೆ. ಸದರಿ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-21 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-21(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ Sri. LBW ವಕೀಲರಿಂದಃ**

ಪ್ರಸ್ತುತ ಪ್ರಕರಣದಲ್ಲಿ ತನಿಖಾಧಿಕಾರಿ ಯಾವ ಕಾರಣಕ್ಕಾಗಿ ದಸ್ತು ನಂ. 3823/2010-11 ದಾಖಲಾತಿಗೆ ಸಂಬಂಧಿಸಿದಂತೆ ಸಾಕ್ಷಿದಾರರ ಗುರುತಿನ ಚೀಟಿಗಳನ್ನು ಒದಗಿಸುವಂತೆ ಕೇಳಿದ್ದಾರೆಂದು ನನಗೆ ಮಾಹಿತಿ ಇರುವುದಿಲ್ಲ. ನನಗೆ ತನಿಖಾಧಿಕಾರಿಗೆ ಯಾವುದೇ ಪತ್ರ ವ್ಯವಹಾರ ಮಾಡಿರುವುದಿಲ್ಲ ಮತ್ತು ನಾನು ಯಾವುದೇ ಪ್ರಮಾಣ ಪತ್ರ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

ಗಣಕೀಕರಿಸಿ ಓದಿ ಹೇಳಿ ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.

ಪ್ರ. ದ. ನ್ಯಾ ದಂ.,
ಮೂಡಲಗಿ.